The Committee met on 24th February 2020 to formulate the guidelines to identify the deserving student on merit-cum-means basis. After detailed deliberations, the Committee resolved to frame the Guidelines to Award the Cash Prize to the eligible students as per the following terms and conditions.

i. The sum of Rs. 2,00,000/- endowed to the KSRDPR University shall be invested in such securities or in any other manner as deemed fit by the Executive Council;
ii. From the interest accruing every year, a First 50% of the Prize (after deducting 10% towards Corpus fund as per University Regulation) shall be awarded to a candidate, who has passed the First Semester of the University Examination of the Food Science and Technology course in the first attempt with highest marks and who shall come within the low income category for the claim of fee concession or scholarship, as fixed by the Karnataka Government from time to time.
iii. The remaining 50% of the Prize amount shall be paid to such awarded student after the announcement of Second Semester examination results of the said course and he/she shall have passed whole examination in the first attempt itself. If he/she fails to pass in the first attempt, the remaining Prize amount shall go to corpus fund/original endowment amount.

iv. If two or more candidates secure equal marks in the First Semester, the amount available for the Prize shall be paid considering the highest score in the basic degree for admission to the Food Science and Technology course.

v. A Committee appointed by the Vice Chancellor shall select a candidate for the award of the Prize.

vi. If for any reason, the Prize is not awarded to any student in any particular year then the Prize amount for the year shall be added to the original endowment amount.

A copy of the proceedings is enclosed herewith for kind information of the Executive Council.

With this information, the matter of Institution of a Prize called "Dr. N. S. Mahendrakar Cash Prize" to be given to a poor deserving student joining M.Sc. Food Science and Technology Course as per above terms and conditions and opening a separate bank account for corpus funds in the State Bank of India, Gadag is placed before the Executive Council for consideration and decision.

**ನಿರ್ಣಯ :**

ವಿಶ್ವವಿದ್ಯಾಲಯದಲ್ಲಿ ನಗದು ಬಹುಮಾನವನ್ನು ನೀಡುವ ಬಗ್ಗೆ ಉನ್ನತ ಸಮಿತಿಯನ್ನು ರಚಿಸಿ, ಸಮಿತಿಯು ನೀಡಿದ ಮಾನದಂಡಗಳ ವಿವರವಾದ ಮಾಹಿತಿಯನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಪ್ರೊ. ಎಸ್. ರಾಜೇಂದ್ರ ಪ್ರಸಾದ್ ಅವರು ಮಾತನಾಡುತ್ತಾ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿಯೂ ಸಹಿತ ಇದೇ ಮಾದರಿಯಲ್ಲಿ ಬಡ ಹಾಗೂ ಅತ್ಯುತ್ತಮ ವಿದ್ಯಾರ್ಥಿಗಳಿಗೆ ಬಹುಮಾನ ನೀಡುತ್ತಿರುವುದಾಗಿ ತಿಳಿಸಿದರು. ಈ ವಿಷಯವಾಗಿ ಶ್ರೀ ಆರ್. ಎಸ್. ದೇಶಪಾಂಡೆ ಇವರು ಮಾತನಾಡುತ್ತಾ, ಪ್ರತಿ ವರ್ಷ ರೂ. 10,000 ಬಹುಮಾನ ನೀಡಿ, ಉಳಿದಂತೆ ಬಹುಮಾನಕ್ಕಾಗಿ ನಿಗದಿಪಡಿಸಿರುವ ಮೂಲ ಮೊತ್ತದ ಠೇವಣಿಯಿಂದ ಬರುವ ಬಡ್ಡಿಯನ್ನು ಮೂಲ ಧನಕ್ಕೆ ಸೇರಿಸುವಂತೆ ಸಲಹೆ ನೀಡಿದರು. ಈ ವಿಷಯವಾಗಿ ಸಭಾ ಅಧ್ಯಕ್ಷರು ಮಾತನಾಡುತ್ತಾ, ನಿಗಧಿತ ರೂ. 10,000 ಬಹುಮಾನವನ್ನು ನೀಡಲು ವಿಶ್ವವಿದ್ಯಾಲಯ ವಿನಿಮಯಗಳ ಪ್ರಕಾರ ಅವಕಾಶವಿರುವುದಿಲ್ಲ ಮತ್ತು ಪ್ರತಿ ವರ್ಷ ಬಡ್ಡಿಯಲ್ಲಿ ಪ್ರತಿ ಶತ 10 ರಷ್ಟು corpus fund ಗೆ ಜಮೆಯಾಗುತ್ತಿರುವುದರಿಂದ corpus fund ಬೆಳೆಯುತ್ತದೆ ಎಂದು ತಿಳಿಸಿದರು ಮತ್ತು ಸಮಿತಿಯ ಶಿಫಾರಸ್ಸನ್ನು ಪರಿಗಣಿಸುವುದು ಸೂಕ್ತವೆಂದು ತಿಳಿಸಿದರು.

ಈ ವಿಷಯವಾಗಿ ಸುಧೀರ್ಘವಾಗಿ ಚರ್ಚಿಸಿ, ಡಾ. ಮಹೇಂದ್ರಕರ ನಗದು ಬಹುಮಾನವನ್ನು ಎಂ.ಎಸ್ಸಿ – ಆಹಾರ ಮತ್ತು ತಂತ್ರಜ್ಞಾನ ಕೋರ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಡ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಷತ್ತಿನ ಶಿಫಾರಸಿನಂತೆ ಇಂತಹ ವಿದ್ಯಾರ್ಥಿಗಳನ್ನು ಗುರ್ತಿಸಲು ಅನುಸರಿಸಬೇಕಾದ ಮಾರ್ಗಸೂಚನೆಗಳನ್ನು ತಯಾರಿಸಲು, ರಚಿಸಿದ ಸಮಿತಿಯ ಶಿಫಾರಸ್ಸಿನನ್ವಯ ನೀಡಲು ಹಾಗೂ ಬ್ಯಾಂಕ್‌ನಲ್ಲಿ ಪ್ರತ್ಯೇಕ ಖಾತೆಯನ್ನು ತೆರೆದು ಠೇವಣಿ ಇಡಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಧರಿಸಿತು.

**RESOLUTION:**

The Chairman briefed the Executive Council the decisions of the meeting of the Committee constituted to formulate the Guidelines to identify the deserving student on merit-cum-means basis. Prof. S. Rajendra Prasad informed similar system is also followed in the University of Agricultural Sciences, Bengaluru. Prof. R. S. Deshpande suggested to fix certain amount for cash prize, so that there will be uniformity in amount every year and rest of the interest amount may go to corpus fund. The Chairman informed the Executive Council that as per the approved Regulations there is no provision for the same and stated that 10% of the interest earned will go to corpus fund every year, which will enable the corpus fund to grow and it is advisable to consider the recommendations of the Committee.

With the above discussion, the Executive Council resolved to approve the Institution of a Prize called "Dr. N. S. Mahendrakar Cash Prize" to be given to a poor deserving student joining M.Sc. Food Science and Technology Course as per guidelines formulated by the Committee constituted by the Academic Council and opening a separate bank account for corpus funds.

**ವಿಷಯ ಸಂಖ್ಯೆ 5: ದಿನಾಂಕ 17-01-2020 ರಿಂದ 19-01-2020 ರವರೆಗೆ ರಾಣೆಬೆನ್ನೂರಿನಲ್ಲಿ ಜರುಗಿದ 'ಕರ್ನಾಟಕ ವೈಭವ-ವೈಚಾರಿಕ ಹಬ್ಬ ಹಾಗೂ ರಾಷ್ಟ್ರಮಟ್ಟದ ಸಮ್ಮೇಳನದ ಸಹಭಾಗಿತ್ವ ಹೊಂದಲು ಅನುದಾನ ಬಿಡುಗಡೆ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

**Subject No.5: To consider according Post-facto approval for the payment made by the University for Karnataka Vaibhava, Vaicharik Habba, held at Ranebennur, from 17/01/2020 to 19/01/2020.**

**ಪರಾಮರ್ಶನ ಟಿಪ್ಪಣಿ**

ರಾಣೆಬೆನ್ನೂರಿನಲ್ಲಿರುವ 'ಪ್ರಜ್ಞಾಪ್ರವಾಹ' ಎಂಬ ಸಂಸ್ಥೆಯಡಿ ಕಾರ್ಯನಿರ್ವಾಹಿಸುತ್ತಿರುವ 'ಪರಿವರ್ತನ' ಎಂಬುದು ರಾಷ್ಟ್ರದ ಬುದ್ಧಿಜೀವಿಗಳ ಒಂದು ತಂಡವಾಗಿದೆ. ಈ ತಂಡದ ವತಿಯಿಂದ 'ಕರ್ನಾಟಕ ವೈಭವ – ವೈಚಾರಿಕ ಹಬ್ಬ' ಎಂಬ ಕಾರ್ಯಕ್ರಮವನ್ನು ದಿನಾಂಕ 17 ರಿಂದ 19 ಜನವರಿ 2020 ವರೆಗೆ ಆಯೋಜಿಸಲು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಾಯೋಜಕತ್ವ ಕೋರಿ ರಾಣೆಬೆನ್ನೂರಿನ 'ಪರಿವರ್ತನ' ಎಂಬ ಸಂಸ್ಥೆಯ ಸಂಯೋಜಕರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಬರೆದ ಪತ್ರದ ಮೇಲೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು "ರಿಜಿಸ್ಟ್ರಾರ್ ರವರಿಗೆ – ಈ ವಿಶೇಷ ಕಾರ್ಯಕ್ರಮಕ್ಕೆ ರೂ. 25.00 ಲಕ್ಷ ಅನುದಾನ ಬಿಡುಗಡೆ ಮಾಡಿರಿ ಎಂದು ದಿನಾಂಕ 31-10-2019 ರಂದು ಸೂಚಿಸಿ ಸದರಿ ಪತ್ರವನ್ನು ವಿಶ್ವವಿದ್ಯಾಲಯಕ್ಕೆ ರವಾನಿಸಿದ್ದರು. ನಂತರ ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಯವರು ಪತ್ರ ಸಂಖ್ಯೆ: ಗ್ರಾಅಪಂರಾ/ಆಕಾ/373/2019, ದಿನಾಂಕ:22/10/2019 ರ ಪತ್ರದಲ್ಲಿ ಮೇಲಿನ ವಿಷಯದಲ್ಲಿ ಮಾನ್ಯ ಸಚಿವರ ನಿರ್ದೇಶನದಂತೆ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮಕ್ಕೆ ಪ್ರಸ್ತಾವನೆಯನ್ನು ಮಂಡಿಸುವಂತೆ ತಿಳಿಸಿರುತ್ತಾರೆ.

ಈ ಸಂಬಂಧ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಪತ್ರ ಸಂಖ್ಯೆ ಇಡಿ 226 ಯುಎನ್‌ಇ 2019, ದಿನಾಂಕ 10-12-2019 ರ ಮೂಲಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿ ಸದರಿ ವಿಚಾರ ಸಂಕಿರಣದಲ್ಲಿ ಎಲ್ಲ ವಿಶ್ವವಿದ್ಯಾಲಯಗಳು ಭಾಗವಹಿಸಿ ಯಶಸ್ವಿಗೊಳಿಸುವಂತೆಯೂ ಹಾಗೂ ಸದರಿ ಕಾರ್ಯಕ್ರಮಕ್ಕೆ ಅನುದಾನವನ್ನು ನೀಡುವ ಕುರಿತು ವಿಶ್ವವಿದ್ಯಾಲಯದ ಹಂತದಲ್ಲಿಯೇ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ.

ಮೇಲಿನ ಸೂಚನೆಗಳನ್ವಯ ದಿನಾಂಕ 31-10-2019 ಹಾಗೂ 19-12-2019 ರಂದು ಪತ್ರಗಳಲ್ಲಿ ವಿಶ್ವವಿದ್ಯಾಲಯ, ಸುಸ್ಥಿರ ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿರುವ ಯೋಜನೆಗಳು ಸುಧಾರಣೆ; ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಗುರುತಿಸುವ ವಿಷಯಗಳಲ್ಲಿ ಸಮ್ಮೇಳನಗಳು, ಕಾರ್ಯಗಾರಗಳು ವಿಚಾರ ಸಂಕಿರಣಗಳನ್ನು ಆಯೋಜಿಸಲು ಅವಕಾಶವಿರುವ ಕುರಿತು ಹಾಗೂ ಪ್ರಸ್ತಾಪಿತ, ವಿಚಾರ ಸಂಕಿರಣಗಳಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಕರ್ನಾಟಕದ ಭವ್ಯ ಪರಂಪರೆ, ಕಲೆ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಅರಿಯುವುದರೊಂದಿಗೆ ಭವಿಷ್ಯದಲ್ಲಿ ಗ್ರಾಮೀಣ ಸಮಾಜದಲ್ಲಿ ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸಿ ಸುಧಾರಣೆ ಮಾಡುವ ದಿಸೆಯಲ್ಲಿ ಜ್ಞಾನಾರ್ಜನೆಗೆ ಸಹಕಾರಿಯಾಗಬಲ್ಲ ವಿಷಯಗಳ ಕುರಿತಾಗಿ ವಿಸ್ತೃತವಾಗಿ ವಿವರಿಸಿ, ಸರ್ಕಾರ, ವಿಶ್ವವಿದ್ಯಾಲಯಕ್ಕೆ ನೀಡಿರುವ ಸಾಮಾನ್ಯ ವೆಚ್ಚಗಳ ಲೆಕ್ಕ ಶೀರ್ಷಿಕೆ 2515-00-102-0-13-103 ಯಡಿ ಸದರಿ ವೆಚ್ಚ ಭರಿಸಲು ಅನುಮತಿ ನೀಡಬೇಕೆಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು, ಇವರಿಗೆ ಕೋರಲಾಗಿತ್ತು.

ಮುಂದುವರೆದು, ವಿಶ್ವವಿದ್ಯಾಲಯದ ಹಲವು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳಲ್ಲಿ ಹಾಗೂ ಶೈಕ್ಷಣಿಕ ಪರಿಷತ್ತಿನ ಸಭೆಗಳಲ್ಲಿ ವಿಶ್ವವಿದ್ಯಾಲಯದ ಬಗ್ಗೆ ಹಾಗೂ ನಡೆಸುತ್ತಿರುವ ಕೋರ್ಸಗಳು ಹಾಗೂ ಅವುಗಳ ಪ್ರಯೋಜನೆಗಳ

ಬಗ್ಗೆ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ಅದರಂತೆ ಬೆಂಗಳೂರಿನಲ್ಲಿ 'ಇಂಡಿಯನ್ ಎಕ್ಷಪ್ರೆಸ್' ವತಿಯಿಂದ ಮತ್ತು ಹುಬ್ಬಳ್ಳಿ ಯಲ್ಲಿ 'ವಿಜಯವಾಣಿ' ಪತ್ರಿಕೆ ಹಾಗೂ 'ದಿಗ್ವಿಜಯ' ಮಾಧ್ಯಮ ದ ಸಹಯೋಗದೊಂದಿಗೆ ನಡೆದ **"Education Expo"** ಗಳಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಸ್ಟಾಲ್‌ಗಳನ್ನು ಹಾಕಿ ಅದರಂತೆ, ವಿಶ್ವವಿದ್ಯಾಲಯದ ಕುರಿತು ಮಾಹಿತಿ ಪ್ರಚುರಪಡಿಸಲಾಗಿರುತ್ತದೆ. ಅಲ್ಲದೇ, ದಿನಾಂಕ: ದಿನಾಂಕ: 3 ರಿಂದ–7 ನೇ ಜನೇವರಿ, 2020 ರಂದು ಬೆಂಗಳೂರಿನಲ್ಲಿ ನಡೆದ **"107th Indian Science Congress Pride of India Expo",** ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಕೋರಿಕೆ ಹಾಗೂ ಸೂಚನೆಗಳನ್ವಯ ವಿಶ್ವವಿದ್ಯಾಲಯದ ವತಿಯಿಂದ ಭಾಗವಹಿಸಿ, ಸದರಿ ಕಾರ್ಯಕ್ರಮದಲ್ಲಿ ಸ್ಥಾಪಿತವಾದ ಸ್ಟಾಲ್‌ಗಳನ್ನು ಉಪಯೋಗಿಸಿಕೊಂಡು, ವಿಶ್ವವಿದ್ಯಾಲಯದ ಕುರಿತು ಮಾಹಿತಿಯನ್ನು ಪ್ರಚುರಪಡಿಸಲಾಗಿರುತ್ತದೆ. ಮುಂದುವರೆದು, ದಿನಾಂಕ: 10–11 ಜನೇವರಿ, 2020 ರಂದು ಬಳ್ಳಾರಿ ಜಿಲ್ಲಾಡಳಿತದ ಸಹಯೋಗದೊಂದಿಗೆ ನಡೆದ **"ಹಂಪಿ ಉತ್ಸವ"** ಕಾರ್ಯಕ್ರಮದಲ್ಲಿಯೂ ಸಹ ಇದೇ ರೀತಿಯಾಗಿ ವಿಶ್ವವಿದ್ಯಾಲಯದ ವತಿಯಿಂದ ಭಾಗವಹಿಸಿ, ಕೋರ್ಸಗಳ ಮಾಹಿತಿಯನ್ನು ಪ್ರಚುರಪಡಿಸಲಾಗಿರುತ್ತದೆ. ದಿನಾಂಕ: 17–19 ರ ಜನೇವರಿ, 2020 ರಂದು ರಾಣೆಬೆನ್ನೂರು ನಗರದಲ್ಲಿ ನಡೆದ **"ಕರ್ನಾಟಕ ವೈಭವ– ವೈಚಾರಿಕ ಹಬ್ಬ"**ದ ಭಾಗವಾಗಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ವಿಶ್ವವಿದ್ಯಾಲಯ ಭಾಗವಹಿಸಿ ಪ್ರದರ್ಶನ ಮಳಿಗೆ ಹಾಕಿ, ಕೋರ್ಸಗಳ ಹಾಗೂ ಶೈಕ್ಷಣಿಕ/ ತರಬೇತಿ ಚಟುವಟಿಕೆಗಳ ಕುರಿತು ಪ್ರಚುರಪಡಿಸಲಾಗಿರುತ್ತದೆ. ಈ ಸಂದರ್ಭದಲ್ಲಿ ಅನೇಕ ವಿದ್ಯಾರ್ಥಿಗಳು ಪೋಷಕರು ವಿಶ್ವವಿದ್ಯಾಲಯದಲ್ಲಿ ಕಲಿಯಬಯಸುವ ಕೋರ್ಸಗಳ ಮಾಹಿತಿ ಪಡೆದುಕೊಂಡಿದ್ದಾರೆ. ಅಲ್ಲದೇ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿ ಇದರಲ್ಲಿ ಪಾಲ್ಗೊಂಡು ಯುವ ಗೋಷ್ಠಿ ಹಾಗೂ ಇತರ ವೈಚಾರಿಕ/ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುತ್ತಾರೆ.

ಕಂಡಿಕೆ (3) ರಲ್ಲಿ ನಮೂದಿಸಿರುವ ವಿಶ್ವವಿದ್ಯಾಲಯದ ಪತ್ರಗಳನ್ನು ಪರಿಗಣಿಸಿದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಇವರ ಪತ್ರ ಸಂಖ್ಯೆ: ಗ್ರಾಅಪಂರಾ 54 ಜಿಪಸ 2019, ದಿನಾಂಕ: 31–01–2020 ರ ಪತ್ರದಲ್ಲಿ ಕರ್ನಾಟಕ ವೈಭವ ವಿಚಾರ ಸಂಕೀರ್ಣಕ್ಕೆ ರೂ.10.00 ಲಕ್ಷಗಳು (ರೂ ಹತ್ತು ಲಕ್ಷಗಳನ್ನು ಮಾತ್ರ) ಅನುದಾನ ನೀಡುವ ಕುರಿತಂತೆ, ಪ್ರಸ್ತುತ ಜಾರಿಯಲ್ಲಿರುವ ಇತರೆ ನಿಯಮಗಳನ್ನು ಪಾಲಿಸುವ ನಿಬಂಧನೆಗಳ ಮೇರೆಗೆ ವಿಶ್ವವಿದ್ಯಾಲಯದ ಅನುದಾನದಿಂದ ರೂ.10.00 ಲಕ್ಷಗಳನ್ನು ಸೂಕ್ತ ಲೆಕ್ಕ ಶೀರ್ಷಿಕೆಯಡಿ ನಿಯಮಾನುಸಾರ ಮಂಜೂರು ಮಾಡಲು ಅನುಮತಿಯನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಸಚಿವರ ನಿರ್ದೇಶನಗಳನ್ನು, ಸರ್ಕಾರದ ಸದರಿ ಪತ್ರದಂತೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಸೂಚನೆಗಳನ್ವಯ, ರಾಜ್ಯದ ಇತರೆ ವಿಶ್ವವಿದ್ಯಾಲಯಗಳು (ಕುವೆಂಪು ವಿಶ್ವವಿದ್ಯಾಲಯ, ದಾವಣಗೆರೆ ವಿಶ್ವವಿದ್ಯಾಲಯ) ಕಾರ್ಯಕ್ರಮದ ಸಹಭಾಗಿತ್ವ ಹೊಂದಿ ಭಾಗವಹಿಸಲು ತಲಾ ರೂ. 10.00 ಲಕ್ಷಗಳನ್ನು ಮಂಜೂರು ಮಾಡಿರುವುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯನ್ನು ನಿರೀಕ್ಷಿಸಿ ವಿಶ್ವವಿದ್ಯಾಲಯದ ವತಿಯಿಂದ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಯಿತು. ಈ ಮೊತ್ತವನ್ನು ನಮ್ಮ ವಿಶ್ವವಿದ್ಯಾಲಯದ 2019–20ನೇ ಸಾಲಿನ ಆಯವ್ಯಯದ ಅನುದಾನ ಮರುಹಂಚಿಕೆಯಲ್ಲಿ ಸಾಮಾನ್ಯ ವೆಚ್ಚಗಳ ಶೀರ್ಷಕೆಯಡಿಯ, ಶೈಕ್ಷಣಿಕ ವಿಶೇಷ ಕಾರ್ಯಕ್ರಮಗಳ ವೆಚ್ಚ (ಸೆಮಿನಾರಗಳು/ ಕಾರ್ಯಗಾರಗಳು/ ಸಮ್ಮೇಳನಗಳು) ಗಳಿಗೆ ರೂ.50,00,000/– ಮಾತ್ರ (ರೂ ಐವತ್ತು ಲಕ್ಷಗಳು ಮಾತ್ರ) ನಿಗದಿಪಡಿಸಲಾದ ಸಾಮಾನ್ಯ ವೆಚ್ಚಗಳ ಲೆಕ್ಕ ಶೀರ್ಷಿಕೆ 2515–00–102–0–13–103 ಅಡಿ ಭರಿಸಲಾಗಿದೆ.

ಮೇಲ್ಕಂಡ 'ಕರ್ನಾಟಕ ವೈಭವ ವೈಚಾರಿಕ ಹಬ್ಬ'ದಲ್ಲಿ ವಿಶ್ವವಿದ್ಯಾಲಯ ಸಹಭಾಗಿತ್ವ ಹೊಂದಿ ವಿಶ್ವವಿದ್ಯಾಲಯದಿಂದ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಿರುವ ಕ್ರಮಕ್ಕೆ ಕಾರ್ಯನಿರ್ವಾಹಕ ಪರಿಷತ್ತಿನ ಘಟನೋತ್ತರ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಮಂಡಿಸಲಾಗಿದೆ.

**Reference Note:**

'Parivartana', a group of national intellectuals working under the aegis of Pragna Pravaha at Ranebennur, had organized a Conference on "Karnataka Vaibhava, Vaicharika Habba" from 17th to 19th January 2020 at Ranebennur. The Coordinator, Parivartan had put up a request to the KSRDPR University for the sponsorship of the programme vide letter,

dated- 31.10.2019. On the said letter, Hon'ble RDPR Minister has endorsed and directed to release Rs.25 lakhs (Rs.Twenty Lakhs only) for this special program. Private Secretary to Honble Minister for Rural Development and Panchayat Raj and Youth Empowerment vide his letter No: ಗ್ರಾಅಪಂರಾ/ಆಕಾ/373/2019, dated: 22-10-2019, has informed to verify about the details cited above and send the proposal accordingly for necessary action.

In this context, it is relevant to mention that the Additional Chief Secretary, Higher Education Department, Govt. of Karnataka, had sent a letter No: ಇಡಿ 226 ಯುಸ್‌ಇ 2019, ದಿನಾಂಕ: 10-12-2019 to all the Universities in the State, to participate in the above conference and to take appropriate decision to release the sponsorship contribution at University level.

The University sent a proposal to Principal Secretary to Government (PR), Govt. of Karnataka, to accord approval for sponsorship for "Karnataka Vaibhav, Vaicharika Habba" and to participate in the programme and to popularise the University activities.

As per the letters dated 31.10.2019 and 19.12.2019, addressed to the Principal Secretary (PR), the University has provision to conduct activities on Sustainable Agriculture, Science and Technology, National and State Level Conferences, Seminars, Workshops, Panel Discussion, Melas, etc. involving students and faculty members. The faculty members and students get an opportunity to understand the rich culture, art, history of Karnataka by participating in such programmes /activities. Further, the University students will be involving in rural and socio-economic development in future. In this regard, the University had requested the Government to accord permission to spend the amount under General expenditure head of account 2515-00-102-0-13-103.

Further, in the recent meetings of the Executive Council and Academic Council University was asked to take steps to popularise the courses offered in the University and to give more advertisement about the University activities and courses for information of the students of other colleges and parents.

In this connection, the University has started many promotional activities like participation in the various event by putting up stalls in "Education Expo" organized by the Indian Express and Deccan Herald in Bangalore, Vijayavani Daily / Digvijaya News in Hubli, "107$^{th}$ Indian Science Congress, Pride of India Expo" organized by the Higher Education Department at Bengaluru, "Hampi Utsava" in Bellary, "Krishi Mela" by the University of Agricultural Sciences, Dharwad, etc. Likewise, the University has actively participated in the "Karnataka Vaibhav, Viacharika Habba" held from 17$^{th}$ to 19$^{th}$ January 2020 by putting up a stall and displaying the University activities. In the said conference, many students / parents / professors / dignitaries have visited the University stall and they were explained about courses being offered in the University and their uniqueness, etc. In addition, our University faculty and students also actively participated in Technical Sessions. It was a very useful conference and benefited the faculty members and students.

The Principal Secretary to Government, Rural Development Department (PR), vide letter No : ಗ್ರಾಅಪಂರಾ 54 ಜಿಪಸ 2019, ದಿನಾಂಕ: 31-01-2020), has informed that the proposal has been considered and accorded permission to sanction a sum of Rs. 10.00 lakh with conditions that the amount may be sanctioned by following the existing University norms for sponsoring such programmes and the expenditure may be met out of the appropriate head of account in the University budget.

Taking into account directions of the RDPR Minister, Govt. of Karnataka, the Principal Secretary (PR), RDPR Department, and as per the letter No : Er 226 ಯುನ್‌ಇ 2019, ದಿನಾಂಕ: 10-12-2019, from the Additional Chief Secretary, Higher Education Department, and since the "Karnataka Vaibhava Vaicharik Habbba" conference was organized in association with other Universities in the State, and also keeping in mind the contributions given by other universities like Davangere University, Kuvempu University, the KSRDPR University has contributed a sum of Rs. 10.00 lakh to the above conference for the promotion of Universities activities, courses etc. pending ratification by the Executive Council. As stated above the KSRDPRU has made a budgetary provision in the Budget for the year 2019-20, earmarking Rs. 50.00 lakh under general expenditure for the academic activities, seminars, workshops, conferences, melas, educational expos, etc. The said sum of Rs. 10.00 lakhs is met under head: General Expenses: 2515-00-102-0-13-103.

With this information, the matter of payment made by the University for Karnataka Vaibhava, Vaicharik Habba, held at Renebennur is placed before the Executive Council for consideration and to accord Post-facto approval.

### ನಿರ್ಣಯ

ಕರ್ನಾಟಕ ವೈಭವ – ವೈಚಾರಿಕ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ವಿಶ್ವವಿದ್ಯಾಲಯಕ್ಕೆ ಅಗಿರುವ ಪ್ರಯೋಜನೆಗಳ ಕುರಿತು ಕಾರ್ಯನಿರ್ವಾಹಕ ಪರಿಷತ್ ಚರ್ಚಿಸಿತು. ಸರ್ಕಾರದ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಂದ ಮಾಡಲಾಗಿರುವ ಪತ್ರ ವ್ಯವಹಾರಗಳು/ ನಿರ್ದೇಶನಗಳನ್ನು ಪರಾಮರ್ಶಿಸಿತು. ವಿಶ್ವವಿದ್ಯಾಲಯದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು, ದಿನಾಂಕ 17 ರಿಂದ 19 ನೇ ಜನೇವರಿ 2020 ರಂದು ರಾಣೇಬಿನ್ನೂರನಲ್ಲಿ ಜರುಗಿದ ಕರ್ನಾಟಕ ವೈಚಾರಿ ಹಬ್ಬಕ್ಕೆ ಪಾವತಿ ಮಾಡಲಾಗಿರುವ ರೂ. 10.00 ಲಕ್ಷ ಮೊತ್ತಕ್ಕೆ ಘಟನೋತ್ತರ ಅನುಮೋದನೆ ನೀಡಲು ನಿರ್ಣಯಿಸಿತು.

### RESOLUTION:

The Executive Council discussed about the benefits for the students, teachers and the University for participating in the Karnatka Vaibhava – Vaicharik Habba event. It also perused various correspondences/directions given by the heads of the concerned Government departments. In the interest of the University, the Executive Council resolved to accord post facto approval for the payment of Rs. 10.00 Lakhs made by the University for Karnataka Vaibhava, Vaicharik Habba, held at Renebennur from 17th to 19th January 2020.

**ವಿಷಯ ಸಂಖ್ಯೆ 6: ದಿನಾಂಕ 13–01–2020 ರಂದು ನಡೆದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆಗೊಂಡಂತೆ, ವಿವಿಧ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ "ಒಡಂಬಡಿಕೆ ಜ್ಞಾಪನಾ ಪತ್ರ"ಗಳ ಮಾಹಿತಿ.**

**Subject No. 6: Information about MoUs with different institutions as approved in Academic Council Meeting held on 13-01-2020**

**ಪರಾಮರ್ಶನ ಟಿಪ್ಪಣಿ**

ಮುಂದುವರೆದು, ದಿನಾಂಕ 13–01–2020 ರಂದು ನಡೆದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಲ್ಲಿ ಸಂಶೋಧನೆ, ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಸ್ಥೆಗಳೊಂದಿಗೆ "ಒಡಂಬಡಿಕೆ ಜ್ಞಾಪನಾ ಪತ್ರ"ಗಳನ್ನು (MoU) ಮಾಡಿಕೊಳ್ಳಲು ನಿರ್ಣಯಿಸಲಾಗಿರುತ್ತದೆ. ಅದರಂತೆ

ಶೈಕ್ಷಣಿಕ ಪರಿಷತ್ತು ಅನುಮೋದನೆಗೊಂಡಂತೆ ಈ ಕೆಳಕಂಡ ಸಂಸ್ಥೆಗಳೊಂದಿಗೆ "ಒಡಂಬಡಿಕೆ ಜ್ಞಾಪನ ಪತ್ರ" ಕುರಿತಾದ ಮಾಹಿತಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಿದೆ. ವಿವರಗಳು ಕೆಳಕಂಡಂತಿವೆ:

i. **Mahatma Gandhi National Council of Rural Education (MGNCRE), ಹೈದರಾಬಾದ್:**

ಸದರಿ ಸಂಸ್ಥೆಯೊಂದಿಗೆ ದಿನಾಂಕ 04-02-2020 ರಂದು ಮಾಡಿಕೊಂಡಿರುವ ಒಡಂಬಡಿಕೆ ಜ್ಞಾಪನಾ ಪತ್ರ (MoU)ವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಮಾಹಿತಿಗಾಗಿ ಮಂಡಿಸಿದೆ.

ii. **National Institute of Rural Development and Panchayat Raj (NIRD & PR), Hyderabad:**

ಶೈಕ್ಷಣಿಕ ಪರಿಷತ್ತಿನಲ್ಲಿ ಅನುಮೋದನೆಗೊಂಡ ಒಡಂಬಡಿಕೆ ಜ್ಞಾಪನ ಪತ್ರ (MoU)ವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಮಾಹಿತಿಗಾಗಿ ಮಂಡಿಸಿದೆ. ಒಡಂಬಡಿಕೆ ಜ್ಞಾಪನ ಪತ್ರ (MoU) ಸಹಿಗಾಗಿ, National Institute of Rural Development and Panchayat Raj (NIRD & PR) ಸಂಸ್ಥೆಗೆ ಕಳುಹಿಸಿಕೊಡಲಾಗಿದೆ.

iii. **Kerala Institute of Local Administration (KILA), ತ್ರಿಷೂರ್, ಕೇರಳ:**

ಶೈಕ್ಷಣಿಕ ಪರಿಷತ್ತಿನಲ್ಲಿ ಅನುಮೋದನೆಗೊಂಡ ಒಡಂಬಡಿಕೆ ಜ್ಞಾಪನ ಪತ್ರ (MoU)ವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಮಾಹಿತಿಗಾಗಿ ಮಂಡಿಸಿದೆ. ಒಡಂಬಡಿಕೆ ಜ್ಞಾಪನ ಪತ್ರವನ್ನು ಸಹಿಗಾಗಿ, Kerala Institute of Local Administration (KILA) ಸಂಸ್ಥೆಗೆ ಕಳುಹಿಸಿಕೊಡಲಾಗಿದೆ.

ಮುಂದುವರೆದು, Centre for Education and Social Studies (CESS), ಬೆಂಗಳೂರು ಮತ್ತು Centre for Multi-Disciplinary Development Research (CMDR), ಧಾರವಾಡ ಸಂಸ್ಥೆಗಳೊಂದಿಗೆ, ದಿನಾಂಕ 17-07-2019 ರಂದು ಮಾಡಿಕೊಂಡ "ಒಡಂಬಡಿಕೆ ಜ್ಞಾಪನ ಪತ್ರ"ಗಳನ್ನು, ದಿನಾಂಕ 13-01-2020 ರಂದು ನಡೆದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಅನುಸಮರ್ಥಿಸಲಾಯಿತು.

**Reference Note:**

The Academic Council in its meeting held on 13-01-2020 resolved to explore the possibilities of signing MoU with various institutions involved in Research, Training and related activities of Rural Development and Panchayat Raj. Accordingly the information pertaining to MoUs with the following Institutions as approved in Academic Council is placed before Executive Council for kind perusal.

i. **Mahatma Gandhi National Council of Rural Education (MGNCRE), Hyderabad:**

The MoU signed with Mahatma Gandhi National Council of Rural Education (MGNCRE), Hyderabad on 04-02-2020 is placed before the Executive Council for kind information.

ii. **National Institute of Rural Development and Panchayat Raj (NIRD & PR), Hyderabad:**

The MoU as approved in Academic Council is placed before the Executive Council for kind information. The MoU has been sent to National Institute of Rural Development and Panchayat Raj (NIRD & PR) for signature.

**iii. Kerala Institute of Local Administration (KILA), Thrisure, Kerala**

The MoU as approved in Academic Council is placed before The Executive Council for kind information. The MoU has been sent to Kerala Institute of Local Administration (KILA) for signature.

Further, MoUs signed with Centre for Education and Social Studies (CESS), Bengaluru and Centre for Multi-Disciplinary Development Research (CMDR), Dharwad on 17-07-2019 were ratified in the Academic Council Meeting held on 13-01-2020

**ನಿರ್ಣಯ**

ಈ ವಿಷಯವಾಗಿ ಸಭಾಧ್ಯಕ್ಷರು ಈಗಾಗಲೇ Mahatma Gandhi National Council for Rural Education (MGNCRE), Hyderabad ಇವರೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಕಿರುವ ವಿಷಯ ಹಾಗೂ Kerala Institute of Local Administration (KILA) ಇವರಿಗೆ ಒಡಂಬಡಿಕೆ ಪತ್ರವನ್ನು ಕಳುಹಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಈ ವಿಷಯವಾಗಿ ಪ್ರೊ. ರಾಜೇಂದ್ರ ಪ್ರಸಾದ ಇವರು ಮಾತನಾಡುತ್ತಾ, ಕೃಷಿ ವಿಶ್ವವಿದ್ಯಾಲಯವು ಸಹ ಗ್ರಾಮೀಣಾಭಿವೃದ್ಧಿ ವಿಷಯಗಳಿಗೆ ಸಂಬಂಧಪಟ್ಟಂತ ವಿಶ್ವವಿದ್ಯಾಲಯವಾಗಿದ್ದು, ಅದರೊಂದಿಗೂ ಸಹ ಒಡಬಂಡಿಕೆ ಮಾಡಿಕೊಳ್ಳಬಹುದೆಂದು ಸಲಹೆ ನೀಡಿದರು. ಸದರಿ ಸಲಹೆಗೆ ಸದಸ್ಯರು ಪ್ರಶಂಸ ವ್ಯಕ್ತಪಡಿಸಿ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಇದರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಲಹೆ ನೀಡಿದರು. ಮುಂದುವರೆದು ಸದಸ್ಯರು ಒಡಂಬಡಿಕೆ ಮಾಡಿಕೊಳ್ಳುವಾಗ Director General, NIRD & PR ಹಾಗೂ Director of KILA ಇವರನ್ನು ಆಹ್ವಾನಿಸಿ ಇತರೆ ಅವಕಾಶ ಮತ್ತು ಸಹಕಾರವನ್ನು ಅನ್ವೇಶಿಸಲು ಸಲಹೆ ನೀಡುತ್ತಾ, ಮೇಲಿನ ವಿಷಯಕ್ಕೆ ಅನುಮೋದನೆ ನೀಡಲಾಯಿತು.

**:RESOLUTION:**

The Executive Council perused the Memorandum of Understanding (MoU) signed between Mahatma Gandhi National Council for Rural Education (MGNCRE), Hyderabad and MoUs sent for signature to Kerala Institute of Local Administration (KILA) and National Institute of Rural Development and Panchayati Raj (NIRD&PR), Hyderabad and noted with appreciation. Further, Dr Rajendra Prasad, V.C., UAS, Bengaluru has expressed his willingness to have MoU with KSRDPRU for academic and research collaboratin as both the Universities have objectives of rual development. The members appreciated the initiative of Dr. Rajendra Prasad and suggested to have a MoU with University of Agricultural Sciences and invite the Director General, NIRD&PR and Director of KILA to explore the opportunities and cooperation.

**Table Agenda 1: To consider the request of University Drivers (on outsource basis) for providing Over Time (OT) allowances for their additional work and eligible TA/DA for out station-duties - reg.**

**Reference Note:**

The Karnataka State Rural Development and Panchayat Raj University has started its activities from the academic year 2017-18. The University is offering several P.G. courses and conducting Training Programmes. Toconduct classes smoothly and get exposure from the experts, the University is availing the services of the Honorary, Visiting, Emeritus Professors, Subject Experts, Field Specialists and successful Entrepreneurs, in addition to services of Guest Faculty as the University is in the process of recruiting regular faculty. The University is conducting the meetings of Executive Council, Academic Council and other Committees and also organizing Training Programmes, Workshops, Conferences, Seminars, Special Lectures, etc. Therefore, the Committee Members, Invites,Subject Experts, Panelists, Resource Persons, etc fromthroughout the country and Karnatakaare being invited to attend/ participate in such programmes. The members of the Statutory Committees, Honorary, Visiting, Emeritus Professors, Subject Experts, Field Specialists, Resource Persons, etc,are frequently visiting the University and the University makes local transportation arrangements for them.To providelocal pick up and drop facility to the Members, Guests, etc., the University drivers have to performextra duty for these servicesfrom Bus Stand, Railway Station, Airport and other localities, sometime during early morning or/and late night. Further, sometimes the drivers are required to visit other places likeBengaluru, etc. on office duty and accordingly they are to be paid eligible TA/DA also as per University rules as paid in other Universities like Karnataka State Law University, Hubballi (enclosed office order of Law University, dated 16-11-2015 for reference).

Mr. Manjunath Karikatti who is working as a driver in the Regional Office of the University at Bengaluru is being paid Over Time (OT) allowances as per the Government Notification No. ಕಾಇ 20 ಎಲ್ಎಂಡಬ್ಲ್ಯೂ 2017, ದಿನಾಂಕ: 28-04-2017(Copy enclosed). Accordingly, the University drivers, who are working at Gadag have requested to provide Over Time (OT) allowances for their extra hoursof duties in addition to their regular duties and also eligible TA/DA for out-station duties.

Hence, the request of University Drivers for providing Over Time (OT) allowances for their additional duties as per above Government Notification and payment of eligible TA/DA for their out-station duties as per University rules is placed before the Executive Council for consideration and decision.

**ನಿರ್ಣಯ**

ಸಭೆಯ ಅಧ್ಯಕ್ಷರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಿಗೆ Over Time (OT) ಹಾಗೂ ಟಿಎ/ಡಿಎ ಭತ್ಯೆಗಳನ್ನು ನೀಡುವ ವಿಷಯವನ್ನು ಮತ್ತು ಅದರ ಅವಶ್ಯಕತೆಯ ಬಗ್ಗೆ ವಿವರವಾಗಿ ಸಭೆಗೆ ಮಂಡಿಸಿದರು. ಕಾರ್ಯನಿರ್ವಾಹಕ ಪರಿಷತ್ತು ಸರ್ಕಾರದ ಆದೇಶ ಮತ್ತು ವಿಶ್ವವಿದ್ಯಾಲಯದ ನಿಯಮಗಳನ್ನು ಪರಿಗಣನೆಗೆ ತೆಗೆದುಕೊಂಡು, ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ದಿನಾಂಕ: 01–01–2020 ರಿಂದ ಜಾರಿಗೆ ಬರುವಂತೆ ವಾಹನ ಚಾಲಕರಿಗೆ, ಹೆಚ್ಚುವರಿ ಕಾರ್ಯ ನಿರ್ವಹಿಸಿದ್ದಕ್ಕೆ Over Time (OT) ಭತ್ಯೆ ಹಾಗೂ ಕೆಲಸದ ನಿಮಿತ್ತ ಬೇರೆ ಊರುಗಳಿಗೆ ತೆರಳಿದಾಗ ಅರ್ಹ ಟಿಎ/ಡಿಎ ಭತ್ಯೆಯನ್ನು ನೀಡಲು ಸಭೆಯು ನಿರ್ಣಯಿಸಿತು.

**RESOLUTION:**

The Chairman briefed the Executive Council the need of the services, payment of OT allowances and eligible TA/DA to University Drivers. The Executive Council considering the Government Orders and University rules, resolved to approve payment of Over Time (OT) allowances for University Drivers for their additional duties rendered and payment of eligible TA/DA for their out-station duties w.e.f. 01/01/2020.

**ವಿಷಯ ಸಂಖ್ಯೆ 2: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದ ವಿಶೇಷ ಕಾಂಪೋನೆಂಟ್ ಯೋಜನೆಗೆ (ಎಸ್.ಸಿ.ಪಿ./ಟಿ.ಎಸ್.ಪಿ) ಅನುದಾನವನ್ನು ಲೆಕ್ಕ ಶಿರ್ಷಿಕೆ:2515-102-0-13-103ರಡಿ ಬಳಕೆ ಮಾಡಲು ಅನುಮೋದನೆ ನೀಡುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 07.12.2019 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ ಸಭೆಯಲ್ಲಿ ಚರ್ಚಿಸಿದಂತೆ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು 2017-18ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರಥಮ ಮತ್ತು ದ್ವಿತೀಯ ವರ್ಷಗಳಲ್ಲಿ ಪ್ರವೇಶ ಪಡೆದಿದ್ದ ಸುಮಾರು 305 ವಿದ್ಯಾರ್ಥಿಗಳಲ್ಲಿ 56 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಯ ಮತ್ತು 21 ವಿದ್ಯಾರ್ಥಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರು. ಮೂರನೇ ವರ್ಷದಲ್ಲಿ ಪ್ರವೇಶ ಪಡೆದವರನ್ನು ಸೇರಿಸಿದರೆ ಸುಮಾರು 94 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದರವರಾಗಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಾಗಿದ್ದು ಇವರು ತಮ್ಮ ವ್ಯಾಸಂಗವನ್ನು ಅರ್ಥಪೂರ್ಣವಾಗಿ ಮುಂದುವರೆಸಲು ಹಲವಾರು ಸವಲತ್ತುಗಳನ್ನು ಒದಗಿಸಬೇಕಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಊಟ ಮತ್ತು ವಸತಿ ವ್ಯವಸ್ಥೆ- ಪ್ರತ್ಯೇಕ ಪುರುಷ ಮತ್ತು ಮಹಿಳಾ ಹಾಸ್ಟೆಲ್‌ಗಳು ಅವಶ್ಯಕವಾಗಿರುತ್ತವೆ. ಅಲ್ಲದೇ ಬಹುತೇಕ ವಿದ್ಯಾರ್ಥಿಗಳು ಪದವಿ ಮಟ್ಟದವರೆಗೂ ಕನ್ನಡದ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಾಗಿದ್ದು, ಇವರಗಳನ್ನು ಈಗಿನ ಜಾಗತಿಕ ಮಟ್ಟದಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವಂತೆ ತಯಾರು ಮಾಡಲು ವಿಶೇಷವಾಗಿ ಆಂಗ್ಲ ಭಾಷೆಯ ಸಂವಹನ ತರಬೇತಿ, ವ್ಯಕ್ತಿತ್ವ ವಿಕಸನ ಅಭಿವೃದ್ಧಿ ಹಾಗೂ ಕಂಪ್ಯೂಟರ್ ಕೌಶಲ್ಯ ತರಗತಿಗಳನ್ನು ನಡೆಸಬೇಕಾಗುತ್ತದೆ ಜೊತೆಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ನೀಡಬೇಕಾಗಬಹುದಾಗಿದೆ.

ಈ ಎಲ್ಲಾ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒದಗಿಸಲು ಹಿಂದಿನ ಹಣಕಾಸು ವರ್ಷಗಳಲ್ಲಿ SCP/TSP ವಿಶೇಷ ಯೋಜನೆಯಡಿಯಲ್ಲಿ ಸುಮಾರು 19.60 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುದಾನವನ್ನು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. (ದಿನಾಂಕ 09-01-2018 ಮತ್ತು 26-12-2018) (ಕ್ರಿಯಾ ಯೋಜನೆಯ ಪ್ರತಿಯನ್ನು ಲಗತ್ತಿಸಲಾಗಿದೆ.)

ಅದರನ್ವಯ ದಿನಾಂಕ 18-11-2019ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಪತ್ರ ಬರೆದು, 2019-20ನೇ ಸಾಲಿನಲ್ಲಿ ನಮ್ಮ ವಿಶ್ವವಿದ್ಯಾಲಯಕ್ಕೆ ಲೆಕ್ಕ ಶೀರ್ಷಿಕೆ 2515-00-102-0-13-103 ರಡಿ ಹಂಚಿಕೆ ಮಾಡಲಾಗಿರುವ ರೂ.1587.00 ಲಕ್ಷಗಳ ಮಿತಿಯೊಳಗೆ ವಿಶ್ವವಿದ್ಯಾಲಯದ ಇತರೆ ಕಾರ್ಯಚಟುವಟಿಕೆಗಳಿಗೆ ಸಾಮಾನ್ಯ ವರ್ಗದ ಕಾರ್ಯಕ್ರಮವು ಸೇರಿದಂತೆ (ಎಸ್.ಸಿ.ಪಿ/ಟಿ.ಎಸ್.ಪಿ) ಯೋಜನೆಗಳಿಗೆ ಒದಗಿಸಲಾಗಿರುವ ಅನುದಾನದ ಮಿತಿಯೊಳಗೆ ಅಗತ್ಯ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ತಿಳಿಸಿರುತ್ತಾರೆ.

ಇದಕ್ಕೆ ಉತ್ತರವಾಗಿ ದಿನಾಂಕ 30-11-2019 ರಂದು ಪತ್ರ ಬರೆದು ಇಲ್ಲಿಯವರೆಗೂ ವಿಶ್ವವಿದ್ಯಾಲಯಕ್ಕೆ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗಳಿಗೆ ಪ್ರತ್ಯೇಕ ಅನುದಾನ ಒದಗಿಸಿರುವುದಿಲ್ಲ. ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಗೆ ಮಂಜೂರು ಮಾಡಲಾಗುವಂತೆ ನಮ್ಮ ವಿಶ್ವವಿದ್ಯಾಲಯಕ್ಕೂ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳಿಗೆ ಪ್ರತ್ಯೇಕ ಅನುದಾನ ಮಂಜೂರು ಮಾಡುವವರೆಗೂ, ವಿಶ್ವವಿದ್ಯಾಲಯಕ್ಕೆ ಲೆಕ್ಕ ಶೀರ್ಷಿಕೆ: 2515-00-102-0-13-103 ರಡಿ ಹಂಚಿಕೆ ಮಾಡಿರುವ ರೂ.1587.00 ಲಕ್ಷಗಳ ಮಿತಿಯೊಳಗೆ ವಿಶ್ವವಿದ್ಯಾಲಯದ ಇತರೆ ಕಾರ್ಯಚಟುವಟಿಕೆಗಳಿಗೆ ಸಾಮಾನ್ಯ ವರ್ಗದ ಕಾರ್ಯಕ್ರಮಗಳೂ ಸೇರಿದಂತೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳಿಗೆ ಸದರಿ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ನಿಯಮಾನುಸಾರ ಮಿತಿಗೊಳ್ಳಪಟ್ಟು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ

ಉಪಯೋಗಕ್ಕಾಗಿ ಹಾಗೂ ವಿದ್ಯಾರ್ಥಿಗಳ ಬೇಡಿಕೆಗಳನುಸಾರ 94 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ, ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ವಿತರಿಸಲು, ವಿಶೇಷ ತರಬೇತಿಗಳನ್ನು (ಆಂಗ್ಲ ಸಂವಹನ ಕೌಶಲ್ಯ ತರಗತಿ, ವ್ಯಕ್ತಿತ್ವ ವಿಕಸನ ತರಗತಿ, ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ಇತ್ಯಾದಿಗಳನ್ನು) ಆಯೋಜಿಸಲು ಹಾಗೂ ಪುಸ್ತಕಗಳನ್ನು ಖರೀದಿಸಲು ಅಂದಾಜು ಮೊತ್ತ ರೂ. 1.10 ಕೋಟಿಗಳ (ರೂ. ಒಂದು ಕೋಟಿ ಹತ್ತು ಲಕ್ಷಗಳು) ಮೊತ್ತದ ಅಗತ್ಯ ಅನುದಾನ ಬಳಕೆ ಮಾಡಿಕೊಳ್ಳಲು ಅನುಮೋದನೆ ನೀಡಬೇಕೆಂದು ಸರ್ಕಾರವನ್ನು ಕೋರಲಾಗಿತ್ತು.

ಈ ಹಿನ್ನೆಲೆಯಲ್ಲಿ, ಮೇಲೆ ತಿಳಿಸಿರುವ ಪ್ರಸ್ತಾವನೆಯನ್ನು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಾಮಾನ್ಯ ವೆಚ್ಚಗಳಿಗೆ 2019–20ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 2515–00–102–0–13–103 ರಡಿ ಹಂಚಿಕೆ ಮಾಡಿರುವ ರೂ.1587.00 ಲಕ್ಷಗಳ ಮಿತಿಯಲ್ಲಿ ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಉದ್ದೇಶಗಳಿಗೆ ಅಂದಾಜು ಮೊತ್ತ ರೂ. 1.10 ಕೋಟಿಗಳನ್ನು (ಒಂದು ಕೋಟಿ ಹತ್ತು ಲಕ್ಷಗಳು ಮಾತ್ರ) ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಬಳಕೆ ಮಾಡಿಕೊಳ್ಳಲು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಿ, ಸ ಸಾಮಾನ್ಯ ವೆಚ್ಚಗಳ ಲೆಕ್ಕ ಶೀರ್ಷಿಕೆ 2515–00–102–0–13–103 ಅಡಿ ಲಭ್ಯವಿರುವ ಅನುದಾನದಲ್ಲಿ SCP/TSP ಯೋಜನೆಗಳಿಗೆ ವೆಚ್ಚ ಮಾಡಲು ಕಾಯನಿರ್ವಾಹಕ ಪರಿಷತ್ತಿನ ದಿನಾಂಕ 07–12–2019ರ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.

ಮುಂದುವರೆದು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ದಿನಾಂಕ 30.11.2019 ರಂದು ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ.) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಪತ್ರ ಸಂಖ್ಯೆ: ಗ್ರಾಅಪ:05:ಜಪಸ:2019 ದಿನಾಂಕ:25.02.2020 ರಂತೆ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಲೆಕ್ಕ ಶಿರ್ಷಿಕೆ 2515–00–102–0–13–103ರಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 94 ವಿದ್ಯಾರ್ಥಿಗಳಿಗೆ SCP/TSP ಯೋಜನೆಗಳಡಿ ಲ್ಯಾಪ್‌ಟಾಪ್ ಖರೀದಿಸಿ ವಿತರಿಸಲು ಹಾಗೂ ವಿಶೇಷ ತರಬೇತಿಯನ್ನು ಆಯೋಜಿಸಲು ಮತ್ತು ಪುಸ್ತಕಗಳನ್ನು ಖರೀದಿಸಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವುದು ಮತ್ತು ಕೆ.ಟಿ.ಪಿ.ಪಿ. ಅಥವಾ ಇತರೆ ಅನ್ವಯಿಕ ನಿಯಮಗಳನ್ನು ಪಾಲಿಸುವಂತೆ ತಿಳಿಸಿದ್ದು (ಪತ್ರದ ಪ್ರತಿ ಲಗತ್ತಿಸಿದೆ) ಅದರಂತೆ. ವಿಶ್ವವಿದ್ಯಾಲಯ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಳಿಗೆ ದಿನಾಂಕ 7.12.2019 ರಂದು ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ಅಜಂಡಾದಲ್ಲಿ ವಿವರಿಸಿದಂತೆ, ಅಂದಾಜು ಮೊತ್ತ ರೂ. 1.10.ಕೋಟಿ ವರೆಗೆ ಲೆಕ್ಕ ಶಿರ್ಷಿಕೆ: 2515–00–102– 0–13–103 ರಡಿ ಬಳಿಕೆ ಮಾಡಿಕೊಳ್ಳಲು ಕರ್ಾನಿರ್ವಾಹಕ ಪರಿಷತ್ತಿನ ಪರಿಗಣನೆ ಮೊತ್ತ ಅನುಮೊದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ಸಭೆಯ ಅಧ್ಯಕ್ಷರು ಮಾತನಾಡುತ್ತಾ, SCP /TSP ಯೋಜನೆಯ ಅಡಿಯಲ್ಲಿ ಸೌಲಭ್ಯಗಳನ್ನು ನೀಡಲು ಅವಶ್ಯವಿರುವ ಮೊತ್ತವನ್ನು ಬಳಕೆ ಮಾಡಿಕೊಳ್ಳುವ ಕುರಿತು ತಿಳಿಸಿದರು. ಇದಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರು ಅನುಮೋದನೆ ನೀಡಿರುವ ಪತ್ರವನ್ನು ಸುಧೀರ್ಘವಾಗಿ ಪರಾಮರ್ಶಿಸಿ, ಲೆಕ್ಕ ಶಿರ್ಷಿಕೆ 2515-00-102-0-13-103 ಯಡಿಯಲ್ಲಿ SCP /TSP ಯೋಜನೆಯ ಅಡಿಯಲ್ಲಿ ಸೌಲಭ್ಯಗಳನ್ನು ನೀಡಲು ಅನುದಾನ ಬಳಕೆಮಾಡಿಕೊಳ್ಳಲು ಅನುಮೋದನೆ ನೀಡಿತು. ಈ ಹಿಂದೆ ದಿನಾಂಕ: 07–12–2019 ರಂದು ನಡೆದ ಕಾರ್ಯನಿರ್ವಾಹಕ ಪರಿಷತ್‌ನಲ್ಲಿ ಚರ್ಚಿಸಿ, ಅನುಮೋದಿಸಿರುವಂತೆ, ಲ್ಯಾಪ್‌ಟಾಪ್‌ಗಳನ್ನು ಖರೀದಿಸುವಾಗ ಟೆಂಡರ್ ಪ್ರಕ್ರಿಯೆ ಅಥವಾ KTPP ಕಾಯ್ದೆಯ 4(g) ಅಡಿಯಲ್ಲಿ ವಿನಾಯಿತಿ ಹೊಂದಿರುವ ಸಂಸ್ಥೆಗಳಿಂದ ಖರೀದಿಸಲು ಸಭೆಯು ಪುನರುಚ್ಚರಿಸಿ ಅನುಮೋದನೆ ನೀಡಿತು.

**:RESOLUTION:**

The Chairman explained the Executive Council the matter relating to utilisation of funds to provide facilities to students under SCP /TSP scheme. The Executive Council perused the matter in detail and the approval order of the Government in the matter and resolved to approve the proposal for utilisation of the required funds under Budget Account Head No: 2515-00-102-0-13-103 for SCP/ TSP Scheme. As per the decision taken in the Executive Council meeting held on 07-12-2019, it was reiterated to procure Laptops either through tender or any institution having 4(g) exemption under KTPP Act.

**Table Agenda 3: Organization of Youth Festival"Grammeena Sobagu" at KSRDPR University, Gadag- reg.**

**Reference Note:**

It was discussed and resolved in the meetings of the Executive Council dated 26/06/2019 and 05/11/2019to give more publicity for the University Courses and also suggested to publicize the University activities both in print and electronic media and take other measures for promotion of admissions. In this connection, meetings of the University Officers with faculty members were held on 12th and 19th December 2019 and suggested measures to be taken for enhancement of admissions in the University and publicize the University activities.

It was suggested to visit different Colleges across the district by faculty members and conduct a meeting with Principals of various Colleges in the University. Accordingly, the faculty members have visited the various Degree Colleges across the Gadag district and demonstrated the University activities and explained the advantages of pursuing the courses being offered in the University. A meeting with different college Principals was convened on 03/01/2020 and sought their co-operation in this regard. It was also suggested to organize Quiz, Debate Competitions, Cultural Youth Fest, etc in the University. Accordingly, the University is organizing a Cultural Youth Fest "Grameena Sobagu" during 27th to 28th March 2020 by inviting students' teams from various Degree colleges from all over the State. About 700 to 800 Students are expected to participate in the event.

Youth Fest would provide platform for college students to exhibit their talents and it will also help to publicize the University activities and courses being offered in the University. There is a Budgetary Provision of Rs. 25,00,000/ in the 2019-20 University Budget for conducting Cultural Youth Fests, Seminars, Workshops, Conferences, etc. The tentative budget of around Rs. 9.5 to 10.00 lakhs towards expenses of the event was proposed in the meeting of the Officers and Teaching Staff held on 19/12/2019. The Tentative Budget includes rent for Auditorium/ Convention Center, Food Charges, Accommodation for participants, Honorarium, TA/ DA for Judges, Stationery and Printing Materials, Photography and Videography, Stage Decoration, Contingency Expenditure, Prize Money, Shields for winners, etc. The various Committees have also been formed for the smooth conduct of Youth Festival in the University.

With this background, the matter of organizing "Grammeena Sobagu" Youth Festival at KSRDPR University, Gadag, on 27th & 28th March 2020 is placed before the Executive Council for consideration and approval.

**ನಿರ್ಣಯ**

ದಿನಾಂಕ: 27 ರಿಂದ 28 ಮಾರ್ಚ್ 2020 ರಂದು ಆಯೋಜಿಸುವ "ಗ್ರಾಮೀಣ ಸೊಬಗು" ಯುವ ಜನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಅವಶ್ಯಕತೆ ಹಾಗೂ ಪ್ರಾಮುಖ್ಯತೆಯನ್ನು ಕಾರ್ಯನಿರ್ವಾಹಕ ಪರಿಷತ್ತು ಸವಿಸ್ತಾರವಾಗಿ ಚರ್ಚಿಸಿತು ಹಾಗೂ ಯುವ ಜನೋತ್ಸವ ಕಾರ್ಯಕ್ರಮ ಆಯೋಜಿಸುವುದಕ್ಕೆ ಪ್ರಸ್ತಾವನೆಯಲ್ಲಿರುವಂತೆ ತಾತ್ಕಾಲಿಕ ಆಯವ್ಯಯದಲ್ಲಿ (Tentative Budget) ತಿಳಿಸಿರುವಂತೆ ಆಯೋಜಿಸಲು ಅನುಮೋದನೆ ನೀಡಲಾಯಿತು.

ಸಭೆಯ ಅಧ್ಯಕ್ಷರು ಕಾರ್ಯನಿರ್ವಾಹಕ ಪರಿಷತ್ ಸಭೆಯಲ್ಲಿ ಪಾಲ್ಗೊಂಡು ಅತ್ಯುತ್ತಮ ಸಲಹೆಗಳನ್ನು ನೀಡಿದುದಕ್ಕಾಗಿ ಸಧಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**RESOLUTION:**

The Executive Council discussed the necessity and significance of organising the youth festival and resolved to approve the proposal to organize "Grammeena Sobagu" Youth Festival at KSRDPR University, Gadag, on 27th & 28th March 2020, as per the tentative budget made for conducting the Youth Festival.

The meeting concluded with thanks to the Members for participating in the meeting and providing valuable suggestions.

Vice Chancellor (Acting)
Chairperson & Registrar
Ex-Officio Member Secretary